

"ಅಂದರೆ ಕೊಲೆಮಾಡಿದವ, ನವೀನ್ ಮನೆಯೊಳಗೆ ಹೋಗಿರುವುದನ್ನು ನೀವು ನೋಡಲಿಲ್ಲ... ದಿಲ್ ಬಾಗ್ ಸಿಂಗ್ ಅವರು ಹೇಳಿದ ಮೇಲೆ ನಿಮಗೆ ಕೊಲೆ ಮಾಡಿದವನು ನವೀನ್ ಅಂತ ಅನಿಸಿತು ಅಲ್ಲವಾ?"

ಅಲ್ಲಿದ್ದವರೆಲ್ಲಾ ದಂಗಾದರು. ಆ ಒಂದು ಪ್ರಶ್ನೆ ಇಡೀ ಪ್ರಕರಣದ ಬುಡವನ್ನೇ ಅಲ್ಲಾಡಿಸಿಬಿಟ್ಟಿತು. ಯಾರನ್ನು ಪ್ರಾಸಿಕ್ಯೂಶನ್ ತನ್ನ ಪ್ರಮುಖ ಸಾಕ್ಷಿ ಎಂದು ಬಿಂಬಿಸಿತ್ತೋ... ಆ ವ್ಯಕ್ತಿ ನಿಜವಾಗಿಯೂ ಕೊಲೆ ಮಾಡುವುದನ್ನು, ಕೊಲೆಗಾರನನ್ನು ನೋಡಿದ್ದಾನಾ ಎಂಬ ಅನುಮಾನ ಮೂಡತೊಡಗಿತು. ಪಬ್ಲಿಕ್ ಪ್ರಾಸಿಕ್ಯೂಟರ್ ಭೂಷಣ್ ಕಡೆ ತಿರುಗಿ ನೋಡಿದರು. ಅವರಿಗೆ ಅರ್ಥ ಆಗಿತ್ತು... ಭೂಷಣ್ ಎಂಥಾ ದೊಡ್ಡ ತಪ್ಪು ಮಾಡಿದ್ದನೆಂದು.

ರವಿಕಾಂತ್ ಏನೋ ಹೇಳ ಹೊರಟ. ಅವನನ್ನು ಅಲ್ಲಿಯೇ ತಡೆಯುತ್ತಾ,

"ದಿಲ್ ಬಾಗ್ ಸಿಂಗ್‌ಗೆ ವಯಸ್ಸಾಗಿದೆ, ಎದ್ದು ಬರಲು ಕಷ್ಟವಾಗುವುದು ಸಹಜ. ಆದರೆ ನೀನು ಯಾಕೆ ಕೊಲೆ ಆದುದನ್ನು ನೋಡಿಯೂ ಕೆಳಕ್ಕೆ ಇಳಿದು ಬರಲು ಅಷ್ಟುಹೊತ್ತು ತೆಗೆದುಕೊಂಡೆ?"

"ಇಲ್ಲಾ ನಾನು ತಕ್ಷಣ ಕೆಳಕ್ಕೆ ಬಂದೆ" ತೊದಲಿದ ರವಿಕಾಂತ್.

"ನಿನ್ನ ರೂಮಿನಿಂದ ಕೆಳಕ್ಕೆ ಇಳಿದು ಬರಲು ಹತ್ತು ಸೆಕೆಂಡ್ ಸಾಕು. ಆದರೆ ನೀನು ದಿಲ್ ಬಾಗ್ ಸಿಂಗ್ ಅಲ್ಲಿಗೆ ಬಂದ ನಂತರ ಬಂದೆ. ಆ ಇಪ್ಪತ್ತು ಸೆಕೆಂಡ್ ಏನು ಮಾಡುತ್ತಿದ್ದೆ? ದಿಲ್ ಬಾಗ್ ಸಿಂಗ್ ಬಂದಾಗ ಆ ಕೊಲೆಗಾರ ನವೀನ್ ಮನೆಯೊಳಗೆ ಹೋದ. ನೀನು ಅಲ್ಲಿಗೆ ಬೇಗ ಬಂದಿದ್ದರೆ... ನೀನೇ ಆ ಕೊಲೆಗಾರನನ್ನು ನೋಡಬಹುದಿತ್ತು, ಹಿಡಿಯಬಹುದಿತ್ತು... ನೀನೇ ಆ ಕೊಲೆಗಾರನನ್ನು ತಪ್ಪಿಸಿಕೊಳ್ಳಲು ಬಿಟ್ಟು ಈಗ ನವೀನ್ ಮೇಲೆ ಆರೋಪ ಹೊರೆಸುತ್ತಿದ್ದಿಯಾ?"

ಇನ್‌ಸ್ಪೆಕ್ಟರ್ ಭೂಷಣ್ ಈ ಪ್ರಶ್ನೆಯನ್ನು ಊಹಿಸಿರಲಿಲ್ಲ... ಶ್ರೀರಂಗಾಚಾರ್ ಇಷ್ಟು ಮೈನ್ಯೂಟ್ ಡೀಟೈಲ್ಸ್ ಬಗ್ಗೆ ಯೋಚನೆ ಮಾಡುತ್ತಾರೆ ಎನ್ನುವ ಆಲೋಚನೆಯೂ ಬಂದಿರಲಿಲ್ಲ!

"ಹೇಳು ರವಿಕಾಂತ್ ಯಾಕೆ ಆ ಇಪ್ಪತ್ತು ಸೆಕೆಂಡ್ ಲೇಟ್ ಆಗಿ ಬಂದೆ?" ಏರು ಧ್ವನಿಯಲ್ಲಿಯೇ ಕೂಗಿದರು ಶ್ರೀರಂಗಾಚಾರ್.

ರವಿಕಾಂತ್ ಬೆದರಿದ. ಭಯ ಅವನ ಮೈಮನಗಳನ್ನು ಸಂಪೂರ್ಣ ಆವರಿಸಿತ್ತು.

"ನನ್ನ ಮೈಮೇಲೆ ಬಟ್ಟೆಗಳು ಇರಲಿಲ್ಲ; ಹಾಕಿಕೊಂಡು ಬರಲು ಲೇಟ್ ಆಯಿತು..." ಆ ಕ್ಷಣಕ್ಕೆ ಬಾಯಿಗೆ ಬಂದಿದ್ದನ್ನು ಹೇಳಿದ.

"ಇಂಥಾ ಚಳಿಗಾಲದಲ್ಲಿ ರಾತ್ರಿ ಬಟ್ಟೆ ಹಾಕಿಕೊಳ್ಳದೇ IAS ಪರೀಕ್ಷೆಗೆ ಓದಿಕೊಳ್ಳುವವರನ್ನು ಇವತ್ತೇ ನೋಡಿದ್ದು" ಎಂದರು ವ್ಯಂಗ್ಯವಾಗಿ.

ಇಡೀ ಕೋರ್ಟ್ ಹಾಲ್ ನಗೆಗಡಲಿನಲ್ಲಿ ತೇಲಿತು.

"ನೀನು ಹೇಳಿದ್ದು ಸುಳ್ಳು ಎಂಬುದು ಜಡ್ಜ್ ಸಾಹೇಬರಿಗೆ ಮನವರಿಕೆ ಆಗಿದೆ ಅಂತ ಅಂದುಕೊಂಡಿದ್ದೇನೆ; ನೀನು ಹೋಗಬಹುದು."

ಚತುರತೆಯಿಂದ ಆ ಮಾತುಗಳನ್ನು ಹೆಣೆದಿದ್ದರು.

ನ್ಯಾಯಾಧೀಶರಿಗೆ ಅದೊಂದು ಸೂಕ್ಷ್ಮವಾದ ಹಿಂಟ್... ಅವರನ್ನು ಆಲೋಚನೆಗೆ ಒಳಗಾಗಿಸುವ ಟ್ರಿಕ್. ಹೀಗೇ ಅಂತ ಹೇಳದೆಯೇ... ಅವರ ಮನಸ್ಸಿನಲ್ಲಿ ಒಂದು ಸಣ್ಣ ಅನುಮಾನದ ಸಸಿಯನ್ನು ಬೆಳೆಸುವುದು!

ಮೈಯೆಲ್ಲಾ ಬೆವರಿನಿಂದ ತೊಯ್ದಿದ್ದ ರವಿಕಾಂತ ತನ್ನ ಸೀಟ್ ಕಡೆ ಓಡಿದ.

"ಮೈಲಾರ್ಡ್... ಪ್ರಾಸಿಕ್ಯೂಶನ್‌ನವರು ಮೂರು ವಿಟ್ನೆಸ್ ತಂದು ನಿಲ್ಲಿಸಿದ್ದರು. ಯಾರೂ ನವೀನ್ ಕೊಲೆ ಮಾಡುತ್ತಿರುವುದನ್ನು ನೋಡಿಲ್ಲ. ಎಲ್ಲಾ ಅವರವರು ನೋಡಿದ್ದನ್ನು ಬೇರೆಯವರ